## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಯಡಿಯಲ್ಲಿ ಸಲ್ಲಿಸಿದ ತರಬೇತಿ ಕಾರ್ಯಕ್ರಮಗಳಿಗೆ ಮಂಜೂರಾತಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:**
1. ದಿನಾಂಕ: 19.03.2018 ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ರವರ ತರಬೇತಿ ಕಾರ್ಯಕ್ರಮಗಳ ಪ್ರಸ್ತಾವನೆ ಹಾಗೂ ಶಿಫಾರಸ್ಸು.
2. ಪರಿಶೀಲನಾ ಸಮಿತಿ ಸಭೆ ದಿನಾಂಕ: 21.03.2018ರ ನಡವಳಿಯಲ್ಲಿನ ತರಬೇತಿ ಕಾರ್ಯಕ್ರಮಗಳಿಗೆ ಶಿಫಾರಸ್ಸು.
3. ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ: 22-03-2018ರ ನಡವಳಿಗಳ ಕಂಡಿಕೆ ಸಂಖ್ಯೆ: ೮ರ ಉಪ ಕಂಡಿಕೆ ಸಂಖ್ಯೆ: 2(ii) ರನ್ವಯ ತರಬೇತಿ ಕಾರ್ಯಕ್ರಮಗಳಿಗೆ ಅನುಮೋದನೆ.
4. ಸರ್ಕಾರದ ಆದೇಶ ಸಂಖ್ಯೆ: ಕೌಉಜೀ 51 ಕೌಗುಇ 2018, ದಿನಾಂಕ: 31.03.2018. ತದ ನಂತರದ ಹೊರಡಿಸಲಾದ ತಿದ್ದುಪಡಿ/ಮಾರ್ಪಾಡು ಆದೇಶಗಳು.
5. ಸರ್ಕಾರಿ ಸುತ್ತೋಲೆ ಸಂಖ್ಯೆ: ಕೌಉಜೀಇ 157 ಕೈತಶಿ 2017, ದಿನಾಂಕ: 21.04-2017.
6. ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 248 ಕೈತಇ 2017, ದಿನಾಂಕ: 14.08.2018.

**ಪ್ರಸ್ತಾವನೆ:**

2017-18ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 26000 ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ ನೀಡುವ ಗುರಿಯನ್ನು ಹೊಂದಿದೆ. ಇದರಂತೆ ಜಿಲ್ಲಾವಾರು ಭೌತಿಕ ಗುರಿಯನ್ನು ನಿಗದಿಪಡಿಸಿ ಸರ್ಕಾರದಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಿಂದ ತರಬೇತಿ ನೀಡಲು ದಿನಾಂಕ: 12.10.2017 ರಂದು ನಡೆದ ನಿಗಮದ 30ನೇಯ ನಿರ್ದೇಶಕರ ಮಂಡಳಿ ಸಭೆಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯಲಾಗಿರುತ್ತದೆ. ತರಬೇತಿ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಪ್ರಕ್ರಿಯೆಯು ವಿಳಂಬವಾದ್ದರಿಂದ ದಿನಾಂಕ: 27.02.2018 ರಂದು ನಡೆದ ನಿರ್ದೇಶಕರ ಮಂಡಳಿ ಸಭೆಯು ನಿಗಮಕ್ಕೆ ನಿಗದಿಪಡಿಸಿರುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ನೀಡಿ ಕೌಶಲಕರ್‌ನಲ್ಲಿ ನೊಂದಣಿಯಾಗಿರುವ ಅರ್ಹ ತರಬೇತಿ ಸಂಸ್ಥೆಗಳನ್ನು ಆಯ್ಕೆ ಮಾಡಲು ಘಟನ್ನೋತ್ತರ ಅನುಮೋದನೆ ಪಡೆಯಲಾಗಿರುತ್ತದೆ. ಆಸಕ್ತ ತರಬೇತಿ ಸಂಸ್ಥೆಗಳಿಂದ ತರಬೇತಿ ನೀಡಲು ಪತ್ರಿಕಾ ಪ್ರಕಟಣೆ ಹೊರಡಿಸಿ ಒಟ್ಟು 23 ಜಿಲ್ಲೆಗಳಲ್ಲಿನ 91 ತರಬೇತಿ ಸಂಸ್ಥೆಗಳಿಂದ ಪ್ರಸ್ತಾವನೆ ಸ್ವೀಕೃತವಾಗಿವೆ. ಉಳಿದ 7 ಜಿಲ್ಲೆಗಳಿಗೆ ಹಾಗೂ ಪ್ರಸ್ತುತ ಬಂದಿರುವ ಜಿಲ್ಲೆಗಳಲ್ಲಿನ ಪ್ರಸ್ತಾವನೆಗಳಲ್ಲಿ ಅನರ್ಹಗೊಂಡಿರುವ ಪ್ರಸ್ತಾವನೆಗಳೂ ಸೇರಿದ ಜಿಲ್ಲೆಗಳಿಗೆ ಕೌಶಲ್ಯಮಿಷನ್‌ನಲ್ಲಿ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಿಂದ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಜಿಲ್ಲಾವಾರು ಸಲ್ಲಿಕೆಯಾಗಿರುವ ತರಬೇತಿ ಸಂಸ್ಥೆಗಳ ವಿವರವು ***ಅನುಬಂಧ*** ದಲ್ಲಿ ನೀಡಲಾಗಿದೆ.

ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಒಟ್ಟಾರೆ 30 ಜಿಲ್ಲೆಗಳಲ್ಲಿನ 177 ತಾಲ್ಲೂಕುಗಳಲ್ಲಿ 26000 ಅಭ್ಯರ್ಥಿಗಳಿಗೆ MSDB Common Norms ಪ್ರಕಾರ ತರಬೇತಿ ನೀಡಲು ತರಬೇತಿ ವೆಚ್ಚವು 37.18 ಕೋಟಿಗಳಾಗಿದ್ದು ಮೌಲ್ಯಮಾಪನ ವೆಚ್ಚವು 3.12 ಕೋಟಿಯಿದ್ದು ಒಟ್ಟಾರೆ ತರಬೇತಿ ಅಂದಾಜು ವೆಚ್ಚವು ರೂ. 40.30 ಕೋಟಿಯಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 88 ಕೌಗುಇ 2017, ದಿನಾಂಕ: 22.02.2018ರಂದು ತರಬೇತಿ ಸಂಸ್ಥೆಗಳಿಗೆ ಭೇಟಿ ನೀಡಿ ನಿಗದಿತ ನಮೂನೆಯಲ್ಲಿ ಪರಿವೀಕ್ಷಣಾ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ತಂಡಗಳಿಂದ ನೀಡಲಾದ ವರದಿಯ ಆಧಾರದ ಮೇಲೆ ಅರ್ಹ ಸಂಸ್ಥೆಗಳಿಂದ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 21.03.2018ರಂದು ನಡೆದ ಪರಿಶೀಲನಾ ಸಮಿತಿಯಲ್ಲಿ ಮಂಡಿಸಲಾಗಿದ್ದು ಸಮಿತಿಯಲ್ಲಿ ಚರ್ಚಿಸಿ ಚರ್ಚೆಯ ನಂತರ 13000 ಅಭ್ಯರ್ಥಿಗಳಿಗೆ ರೂ. 20.30 ಕೋಟಿ ರೂಗಳ ವೆಚ್ಚದಲ್ಲಿ ತರಬೇತಿ ಕಾರ್ಯಕ್ರಮಕ್ಕೆ ಅಧಿಕಾರಯುಕ್ತ ಸಮಿತಿಯ ಅನುಮೋದನೆ ಪಡೆಯಲು ಶಿಫಾರಸ್ಸು ಮಾಡಿತು.

ದಿನಾಂಕ: 22.03.2018ರಂದು ನಡೆದ ಅಧಿಕಾರಯುಕ್ತ ಸಮಿತಿಯ ನಡವಳಿಯ ಕಂಡಿಕೆ 2 ರ ಉಪಕಂಡಿಕೆ (ii) ರನ್ವಯ ಇದಕ್ಕೆ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 1309 ವೆಚ್ಚ 12/17, ದಿನಾಂಕ: 05.12.2017 ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ ನೀಡಿದ್ದು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 248 ಕೈತಇ 2017, ದಿನಾಂಕ: 14.08.2017 ರಲ್ಲಿ ನೀಡಿರುವ ಆರ್ಥಿಕ ಅಧಿಕಾರವನ್ನು ಚಲಾಯಿಸಿ ಅನುಷ್ಠಾನವನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿದೆ. ಇದಕ್ಕೆ 50% ರಷ್ಟು ಹಣವನ್ನು ಬಿಡುಗಡೆ ಮಾಡಲು ತೀರ್ಮಾನಿಸಿದೆ.

**ಆದ್ದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.**

**ಸರ್ಕಾರಿ ಆದೇಶ ಸಂ: ಕೌಉಜೀಇ 08 ಕೌಗುಪ 2018, ಬೆಂಗಳೂರು,**

**ದಿನಾಂಕ: 27-03-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ 2017-18ರ ಸಾಲಿನಲ್ಲಿ Expression of Interest (EoI) ಪಡೆದಿರುವ 23 ಜಿಲ್ಲೆಗಳಲ್ಲಿನ 91 ತರಬೇತಿ ಸಂಸ್ಥೆಗಳ ಹಾಗೂ ಉಳಿದ 7 ಜಿಲ್ಲೆಗಳಲ್ಲಿ kaushalkar.com ನಲ್ಲಿ ಮಾನ್ಯತೆ ಪಡೆದಿರುವ ತರಬೇತಿ ಸಂಸ್ಥೆ/ಕೇಂದ್ರಗಳ ಮೂಲಕ ಆಯ್ದ ವೃತ್ತಿಗಳಲ್ಲಿ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಒಟ್ಟು ತರಬೇತಿ ವೆಚ್ಚವಾದ ರೂ. 20.30 ಕೋಟಿ ರೂಗಳಲ್ಲಿ 13000 ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ ನೀಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿಯನ್ನು ನೀಡಿ ಆದೇಶಿಸಿದೆ. ಜಿಲ್ಲಾವಾರು ತರಬೇತಿ ಸಂಸ್ಥೆಗಳ ಸಂಖ್ಯೆಯನ್ನು ***ಅನುಬಂಧ*** ದಲ್ಲಿ ನೀಡಲಾಗಿದೆ.

ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 1309 ವೆಚ್ಚ 12/17, ದಿನಾಂಕ: 05.12.2017 ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ ನೀಡಿದ್ದು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 248 ಕೈತಇ 2017, ದಿನಾಂಕ: 14.08.2017 ರಲ್ಲಿ ನೀಡಿರುವ ಆರ್ಥಿಕ ಅಧಿಕಾರವನ್ನು ಚಲಾಯಿಸಿ ಅನುಷ್ಠಾನವನ್ನು ಕೈಗೊಳ್ಳಲು ಅಧಿಕಾರಯುಕ್ತ ಸಮಿತಿಯು ಅನುಮೋದನೆಯನ್ನು ನೀಡಿದೆ.

ಸದರಿ ತರಬೇತಿ ವೆಚ್ಚವನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಲೆಕ್ಕ ಶಿರ್ಷಿಕೆ 2230-02-101-0-09 ಕೌಶಲ್ಯ ಅಭಿವೃದ್ಧಿ ಮಿಷನ್ ಅಡಿಯಲ್ಲಿ ಭರಿಸತಕ್ಕದ್ದು.

**ಷರತ್ತು ಮತ್ತು ನಿಬಂಧನೆಗಳು**

1. ತಪಾಸಣಾ ತಂಡಗಳಿಂದ ಕೇಂದ್ರಗಳ ವರದಿ ಸ್ವೀಕೃತವಾದ ನಂತರ ಕೇಂದ್ರಗಳಿಗೆ ತಾತ್ಕಾಲಿಕ ಮಾನ್ಯತೆ ನೀಡುವುದು ಹಾಗೂ ತರಬೇತಿ ಸಂಸ್ಥೆಗಳು Franchises ಹೊಂದಿರಬಾರದು ಹಾಗೂ ಸಂಸ್ಥೆಗಳಿಂದ ಬೇರೆ ಯಾವುದೇ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಬಾರದು.

2. ಪ್ರತಿಯೊಂದು ತರಬೇತಿ ಕೇಂದ್ರವು **"ಎ" ಶ್ರೇಣಿ** ಪಡೆದು ಮಾನ್ಯತೆ ಹೊಂದಿರತಕ್ಕದ್ದು ಹಾಗೂ ತರಬೇತಿ ಮಾನದಂಡಗಳನ್ನು ಹಾಗೂ Qualifications Pack ಗಳನ್ನು ಅನುಸರಿಸಬೇಕು.

3. ಕೌಶಲ್ಯ ಭಾಗ್ಯ ಯೋಜನೆಯಡಿ ದೂರವಾಣಿ ಹಾಗೂ ಮುಖಾಮುಖಿ ಸಮಾಲೋಚನೆ ಪಡೆದ ಅಭ್ಯರ್ಥಿಗಳಿಗೆ ಆದ್ಯತೆ ನೀಡುವುದು. ಒಂದು ವೇಳೆ ಅಭ್ಯರ್ಥಿಗಳು ಲಭ್ಯವಿಲ್ಲದಲ್ಲಿ kaushalkar.com ನಲ್ಲಿನ ಅನ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.

4. ಕ್ಷೇತ್ರ ಕೌಶಲ್ಯ ಪರಿಷತ್ತಿನಿಂದ ಅನುಮೋದಿತವಾದ ಜಾಬ್‌ರೋಲ್ಸ್ ಕೋರ್ಸ್‌ಗಳಲ್ಲಿ ನಿಗದಿತ ಪಠ್ಯಕ್ರಮದ ಅನುಸಾರ ತರಬೇತಿ ನೀಡಬೇಕಾಗಿರುತ್ತದೆ.

5. ಎನ್.ಎಸ್.ಕ್ಯೂ.ಎಫ್/ಎನ್.ಎಸ್.ಡಿ.ಸಿ ಯಿಂದ ನಿಗದಿಪಡಿಸಿರುವ ಮಾನದಂಡಗಳ ಅನುಸಾರ ತರಬೇತಿಯನ್ನು ನೀಡುವುದು.

6. ಭಾರತ ಸರ್ಕಾರದ MSDB ಅಧಿಸೂಚನೆಯಂತೆ "Common Norms" MSDE Notification Dated: 15.07.2015 and "Office Memorandum"/Amendments" dated: 20th May 2016 & 28th Feb 2017 ನಿಯಮ ಅನುಸರಿಸಬೇಕು.

7. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮಾರ್ಗಸೂಚಿಗಳನ್ನು ಮೇಲೆ ಓದಲಾದ ಕ್ರ. ಸಂ. (5)ರಲ್ಲಿ ಹೊರಡಿಸಲಾಗಿದ್ದು, ಸದರಿ ಮಾರ್ಗಸೂಚಿಯಲ್ಲಿ ವಿವಿಧ ವರ್ಗಗಳಿಗೆ ಒಟ್ಟು ತರಬೇತಿ ಅಭ್ಯರ್ಥಿಗಳಿಗೆ ನಿಗಧಿಪಡಿಸಿದಂತೆ ಶೇಕಡವಾರು ಮೀಸಲಾತಿಯನ್ನು ಅನುಸರಿಸುವುದು. kaushalkar.com ವೆಬ್ ಪೋರ್ಟಲ್‌ನಲ್ಲಿ ನೋಂದಾಯಿಸಿದ ಅಭ್ಯರ್ಥಿಗಳ ಪಟ್ಟಿಯಿಂದ ಅನುಬಂಧದಲ್ಲಿನ ತರಬೇತಿ ಕಾರ್ಯಕ್ರಮಗಳಿಗೆ ಅಭ್ಯರ್ಥಿಗಳ ಆಯ್ಕೆಯನ್ನು ಕೈಗೊಳ್ಳುವುದು.

8. ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 51 ಕೌಗುಇ 2018, ಬೆಂಗಳೂರು ದಿನಾಂಕ: 31.03.2018 ತದ ನಂತರದ ಹೊರಡಿಸಲಾದ ತಿದ್ದುಪಡಿ/ಮಾರ್ಪಾಡು ಆದೇಶಗಳನ್ವಯ ಕಂತುಗಳಲ್ಲಿ ಪಾವತಿ ಮಾಡುವ ವಿಧಾನದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡುವುದು.

9. **"ವೃತ್ತಿ ತರಬೇತಿ ಸಂಸ್ಥೆಗಳು/ತರಬೇತಿ ಕೇಂದ್ರಗಳಿಗೆ ಗುರಿಗಳ ಹಂಚಿಕೆ, ಅಭ್ಯರ್ಥಿಗಳ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ ಮತ್ತು ಉದ್ಯೋಗ ನಿಯುಕ್ತಿ ಹಾಗೂ ಉದ್ಯೋಗ ನಿಯುಕ್ತಿ ನಂತರ ಅನುಸರಣೆ ಕುರಿತು ವಿಧಾನಗಳ" (Procedure for Allocation of Targets to Training providers (TP), Training Centres (TCs), Training Assessment, Certification and Placement and Post Placement of Candidates)** ಮಾರ್ಗಸೂಚಿಯನ್ನು ಅನುಸರಿಸಿ ಉಸ್ತುವಾರಿ ಮಾಹಿತಿ ವ್ಯವಸ್ಥೆಯನ್ನು **(MIS)** ತಯಾರಿಸಿ ಗುತ್ತಿಗೆ ಮುಗಿಯುವವರೆಗಿನ ಎಲ್ಲಾ ಪ್ರಕ್ರಿಯೆಗಳ ಉಸ್ತುವಾರಿಯನ್ನು ಕೈಗೊಳ್ಳುವುದು.

10. ವೃತ್ತಿ ತರಬೇತಿ ಸಂಸ್ಥೆಯು ಮಂಜೂರಾದ ವಿವಿಧ ಉದ್ಯೋಗ ವೃತ್ತಿಗಳಲ್ಲಿ ತರಬೇತಿಯನ್ನು ಹೊಂದುವ ಅಭ್ಯರ್ಥಿಗಳ ಮೌಲ್ಯಮಾಪನ ಮತ್ತು ಪ್ರಮಾಣೀಕರಣವನ್ನು (Assessment and Certification) ಸಂಬಂಧಪಟ್ಟ ವಲಯ ಕೌಶಲ್ಯ ಪರಿಷತ್ತುಗಳು ಪಟ್ಟಿ ಮಾಡಿದ ಮೌಲ್ಯ ಮಾಪನ ಏಜೆನ್ಸಿಗಳ ಮೂಲಕ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಈರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಎ&ಇ), ಜಿ&ಎಸ್.ಎಸ್.ಎ), ಇ &ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ಆಯುಕ್ತರು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ.
3. ನಿರ್ದೇಶಕರು ಕರ್ನಾಟಕ ಕೌಶಲ್ಯ ಮಿಷನ್ ಉದ್ಯೋಗ ಮತ್ತು ತರಬೇತಿ ಇಲಾಖೆ.
4. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ,
5. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ,
6. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳು,
7. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಗೆ,
8. **Managing Director, Karnataka Skill Development Corporation, Dairy Circle, Bengaluru-29**.
9. ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ಪ್ರಾಂಶುಪಾಲರು ಕೈಗಾರಿಕಾ ತರಬೇತಿ ಕೇಂದ್ರ,
10. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
11. ಮಿಷನ್ ನಿರ್ದೇಶಕರು, ಸಂಜೀವಿನಿ – ಕೆ.ಎಸ್.ಆರ್.ಎಲ್.ಪಿ.ಎಸ್.
12. ಮುಖ್ಯ ಯೋಜನಾಧಿಕಾರಿಗಳು, ನಗರ ಬಡತನ ನಿರ್ಮೂಲನಾ ನಿರ್ವಹಣಾ ಘಟಕ (ಯುಪಿಎಂಯು)

13. ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್. (ಸ್ಕಿಲ್ಸ್).
14. ಕೌಶಲ್ಯಾಭಿವೃದ್ಧಿ ತರಬೇತಿಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು
15. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
16. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

**ಪ್ರತಿಯನ್ನು :**

1. ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು
3. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ.
6. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-3&9),ವಿಧಾನ ಸೌಧ, ಬೆಂಗಳೂರು
7. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವಿಕಾಸ ಸೌಧ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

<u>ಅನುಬಂಧ</u>

**ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 08 ಕೌಗುಪ 2018 ಬೆಂಗಳೂರು ದಿ: 27.03.2018**

| ಜಿಲ್ಲಾವಾರು ಸಲ್ಲಿಕೆಯಾಗಿರುವ ತರಬೇತಿ ಸಂಸ್ಥೆಗಳ ಪಟ್ಟಿ | | |
|---|---|---|
| ಕ್ರಮ. ಸಂಖ್ಯೆ | ಜಿಲ್ಲೆಗಳ ಹೆಸರು | ತರಬೇತಿ ಸಂಸ್ಥೆಗಳ ಸಂಸ್ಥೆ |
| 1 | ಕಲ್ಬುರ್ಗಿ | 8 |
| 2 | ಬಾಗಲಕೋಟೆ | 1 |
| 3 | ಬೆಂಗಳೂರು ನಗರ | 12 |
| 4 | ಬೆಂಗಳೂರು ಗ್ರಾಮಾಂತರ | 2 |
| 5 | ಬೆಳಗಾವಿ | 7 |
| 6 | ಬಳ್ಳಾರಿ | 4 |
| 7 | ರಾಮನಗರ | 1 |
| 8 | ಬಿಜಾಪುರ | 2 |
| 9 | ಚಿಕ್ಕಬಳ್ಳಾಪುರ | 2 |
| 10 | ಚಿಕ್ಕಮಗಳೂರು | 2 |
| 11 | ಚಿತ್ರದುರ್ಗ | 9 |
| 12 | ದಕ್ಷಿಣ ಕನ್ನಡ | 2 |
| 13 | ದಾವಣಗೆರೆ | 4 |
| 14 | ಧಾರವಾಡ | 2 |
| 15 | ಗದಗ | 6 |
| 16 | ಕೋಲಾರ | 1 |
| 17 | ಕೊಪ್ಪಳ | 1 |
| 18 | ಮೈಸೂರು | 7 |
| 19 | ರಾಯಚೂರು | 4 |
| 20 | ಶಿವಮೊಗ್ಗ | 8 |
| 21 | ತುಮಕೂರು | 2 |
| 22 | ಉಡುಪಿ | 2 |
| 23 | ಯಾದಗಿರಿ | 2 |
| **ಒಟ್ಟು** | | **91** |

ಸರ್ಕಾರದ ಅಧೀನ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ
ವಿಕಾಸ ಸೌಧ, ಬೆಂಗಳೂರು